## ರುಚಿಕರ ಬಾರೆಹಣ್ಣು!

ಮೊನ್ನೆ ಊರ ಸಮೀಪದ ಕೃಷ್ಣಮೃಗ ಅಭಯಾರಣ್ಯಕ್ಕೆ ಹೋಗಿದ್ದೆ. ಕಾಯಿ, ಹಣ್ಣುಗಳಿಂದ ತುಂಬಿದ್ದ ಬಾರೆಹಣ್ಣಿನ ಗಿಡ ಕಣ್ಣಿಗೆ ಬಿತ್ತು. ಬರ ಪೀಡಿತ ಪ್ರದೇಶಗಳು ಮತ್ತು ಒಣ ಪ್ರದೇಶಗಳಲ್ಲಿ ಕಂಡುಬರುವ ದುಂಡನೆಯ ಆಕಾರದ ಈ ಬಾರೆಹಣ್ಣುಗಳೆಂದರೆ ಹಳ್ಳಿಯ ಹುಡುಗರಿಗೆ ಅಪ್ಯಾಯಮಾನ. ದನ ಕಾಯುವ ಹುಡುಗರು ಮುಳ್ಳಿನ ಗಿಡದಲ್ಲಿ ಅಡಗಿರುವ ಬಾರೆಹಣ್ಣು ಆಯ್ದು ತಿನ್ನುತ್ತಾರೆ. ಇತ್ತೀಚಿಗೆ ತೋಟಗಾರಿಕೆಯಲ್ಲಿ ದೊಡ್ಡ ಗಾತ್ರದ ಜನಪ್ರಿಯ ತಳಿಗಳನ್ನು ಬೆಳೆಯಲಾಗುತ್ತದೆ. ಬಾರೆಹಣ್ಣಿನಲ್ಲಿ ಎ, ಬಿ ಹಾಗೂ ಸಿ ಅನ್ನಾಂಗಗಳಿವೆ.

**-ಪ್ರಕಾಶ ಎಸ್. ಮನ್ನಂಗಿ, ಹಾವೇರಿ**





## ಬಸದಿ ಕಂಬದ ಬ್ಯಾಲನ್ಸ್

ಗೇರಸೊಪ್ಪಾದ ಪ್ರಖ್ಯಾತ ಚತುರ್ಮುಖ ಬಸದಿಯ ಸುತ್ತ– ಅಧಿಷ್ಠಾನದ ಮೇಲೆ ಕಲ್ಲಿನ ಕಂಬಗಳನ್ನು ಇರಿಸಲಾಗಿದೆ. ಈ ಕಂಬಗಳ ಮೇಲ್ಭಾಗದಲ್ಲಿ ಏನೂ ಇಲ್ಲ. ಆದರೆ ಶತಮಾನಗಳ ಕಾಲದಿಂದ ಈ ಕಂಬಗಳು ಯಾವುದೇ ಆಧಾರವಿಲ್ಲದೇ ನಿಂತಿವೆ! ಚೂರೂ ಓರೆಕೋರೆಯಿಲ್ಲದೇ ಸರಳರೇಖೆಯಲ್ಲಿರುವ ಕಂಬಗಳು ಗುರುತ್ವಾಕರ್ಷಣೆಯಿಂದಾಗಿ ಯಾವುದೇ ಆಧಾರವಿಲ್ಲದೇ ನಿಲ್ಲಬಲ್ಲವು.

**-ಸುರೇಶ ತಾಂಡೇಲ, ಹೊನ್ನಾವರ**

## ವಿಶಿಷ್ಟ ಆಲದ ಮರ

ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕು ಚಿಕ್ಕಸಾಸಲು ಗ್ರಾಮದ ಭೂತೇಶ್ವರ ಮಂದಿರದ ಹಿಂಭಾಗದ ಆಲದ ಮರ ಬಹಳ ವಿಶಿಷ್ಟವಾಗಿದ್ದು ಭಕ್ತರ ಶ್ರದ್ಧಾ ಕೇಂದ್ರವಾಗಿದೆ. ತಮ್ಮ ಮನದ ಆಸೆಯನ್ನು ಒಂದು ಚೀಟಿಯಲ್ಲಿ ಬರೆದು ಚೀಲದಲ್ಲಿ ಹಾಕಿ ಮರಕ್ಕೆ ಕಟ್ಟಿದರೆ ಆಸೆ ಈಡೇರುವುದೆಂದು ಭಕ್ತರ ನಂಬಿಕೆ. ಈ ರೀತಿ ಬರೆದ ಸಾವಿರಾರು ಚೀಟಿಗಳು ಈ ಮರದ ಸುತ್ತ ಕಂಡುಬರುತ್ತವೆ.

**-ಎನ್.ಎಸ್. ಅಶ್ವಿನಿ ಸಂತೋಷ್, ಚಿತ್ರದುರ್ಗ**

